(Off) +91(0821)2526301-353
(Fax) +91(0821) 2330166
e.mail: ceo_zp_mys@nic.in
ceomys@kar.nic.in

ಜಿಲ್ಲಾ ಪಂಚಾಯತ್, ಮೈಸೂರು
ZILLA PANCHAYAT, MYSURU

ಸಂಖ್ಯೆ : ಇ-ಆಡಳಿತ/ಗಾಂ.ಸಾ.ಕಾ/01/2013-14 ದಿನಾಂಕ : 10/02/2015

## ಗಾಂಧೀ ಸಾಕ್ಷಿ ಕಾಯಕ ತಂತ್ರಾಂಶದ ಫೋಟೋ ಆಡಿಟಿಂಗ್ ಸಭೆಯ ಸಭಾ ನಡವಳಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಕಾಮಗಾರಿಗಳನ್ನು ಗಾಂಧೀ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸುವುದನ್ನು ಈಗಾಗಲೇ ಕಡ್ಡಾಯಗೊಳಿಸಿದ್ದು, ಸರ್ಕಾರದ ಸುತ್ತೋಲೆಯನ್ವಯ ಕಾಮಗಾರಿಗಳ ಫೋಟೋ ಆಡಿಟ್ ಕಾರ್ಯವನ್ನು ಜಿಲ್ಲಾ ಪಂಚಾಯತ್ ಹಂತದಲ್ಲಿ ಮಾಡಲಾಗುತ್ತಿದೆ. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶದಂತೆ ದಿನಾಂಕ : 10/02/2015 ರ ಬೆಳಗ್ಗೆ 11-00 ಗಂಟೆಗೆ ಜಿಲ್ಲಾ ಪಂಚಾಯತ್ ಮುಖ್ಯ ಸಭಾಂಗಣದಲ್ಲಿ ಫೋಟೋ ಆಡಿಟಿಂಗ್ ಕುರಿತ ಸಭೆಯನ್ನು ಆಯೋಜಿಸಲಾಗಿತ್ತು. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಮತ್ತು ತಾಲ್ಲೂಕು ಪಂಚಾಯತ್ ಕಚೇರಿಗಳಿಂದ ಲೆಕ್ಕಪತ್ರ ಅಧೀಕ್ಷಕರುಗಳು, ತಾಲ್ಲೂಕು ಪಂಚಾಯಿತಿಗಳ ಸಹಾಯಕ ಲೆಕ್ಕಾಧಿಕಾರಿಗಳು, ಕಂಪ್ಯೂಟರ್ ಆಪರೇಟರ್‌ಗಳು ಮತ್ತು ಗಾಂಧೀ ಸಾಕ್ಷಿ ಕಾಯಕ ತಂತ್ರಾಂಶ ನಿರ್ವಹಿಸುವ ಎಲ್ಲಾ ತಾಂತ್ರಿಕ ಸಿಬ್ಬಂದಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

ಮುಖ್ಯ ಲೆಕ್ಕಾಧಿಕಾರಿಗಳು ಸಭೆಯನ್ನು ಪ್ರಾರಂಭಿಸಿ ಮಾತನಾಡುತ್ತಾ, ಗಾಂಧೀ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಫೋಟೋ ಆಡಿಟ್‌ಗಾಗಿ ಜಿಲ್ಲಾ ಪಂಚಾಯತ್‌ಗೆ ಸ್ವೀಕೃತವಾಗುವ ಹಲವು ಕಾಮಗಾರಿಗಳ ವಿವರಗಳು ಅಪೂರ್ಣವಾಗಿದ್ದು, GPS, Initial Photo, Final Photo, MB Book & Bill Form ಗಳನ್ನು ಸರಿಯಾದ ಕ್ರಮದಲ್ಲಿ ಆರೋಹಿಸದ ಕಾರಣ, ಈ ಕಚೇರಿ ಹಂತದಲ್ಲಿ ಕಾಮಗಾರಿಗಳನ್ನು Reject ಮಾಡಲಾಗುತ್ತಿದೆಯೆಂದು ತಿಳಿಸಿದರು. ಗಾಂಧೀ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಾಮಗಾರಿಗಳನ್ನು ಯಾವ ರೀತಿ ಆರೋಹಿಸಬೇಕೆಂಬ ಬಗ್ಗೆ ಎನ್.ಐ.ಸಿ. ಅಧಿಕಾರಿಗಳಾದ ಶ್ರೀ ದೇವರಾಜ್‌ರವರು ಪ್ರಾತ್ಯಕ್ಷತೆ ಮೂಲಕ ಪ್ರತಿಯೊಂದು ಹಂತಗಳನ್ನು ವಿವರಿಸಿದರು. ಇ-ಪಂಚಾಯತ್ ಡಿ.ಪಿ.ಎಂ.ಯು. ಮತ್ತು ಇ-ಆಡಳಿತ ವಿಷಯ ನಿರ್ವಾಹಕರಾದ ಶ್ರೀ ಟಿ.ಆರ್.ಮಧುರವರು ಸಭೆಯಲ್ಲಿ ಹಾಜರಿದ್ದರು.

ಗಾಂಧೀ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಾಮಗಾರಿಗಳನ್ನು ಅಳವಡಿಸುವ ಸಂಧರ್ಭದಲ್ಲಿ ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳ ಬಗ್ಗೆ ಲೆಕ್ಕ ಅಧೀಕ್ಷಕರು ಹಾಗು ಕಂಪ್ಯೂಟರ್ ಆಪರೇಟರ್‌ಗಳಿಗಿದ್ದ ಕೆಲವು ಸಂದೇಹಗಳನ್ನು ಸಭೆಯಲ್ಲಿ ಪರಿಹರಿಸಲಾಯಿತು. ತಂತ್ರಾಂಶಕ್ಕೆ ಸಂಬಂಧಿಸಿದ ಯಾವುದೇ ಸಂದೇಹಗಳು ಮತ್ತು ಸಮಸ್ಯೆಗಳಿದ್ದಲ್ಲಿ, ಡಿ.ಪಿ.ಎಂ.ಯು. ಮತ್ತು ಎನ್.ಐ.ಸಿ. ಅಧಿಕಾರಿಗಳನ್ನು ಸಂಪರ್ಕಿಸಲು ಮತ್ತು ಅಧಿಕೃತ ಇ-ಮೇಲ್ ಪತ್ರಗಳ ಮೂಲಕ ವ್ಯವಹರಿಸಲು ತಿಳಿಸಲಾಯಿತು.

ಅಂತಿಮವಾಗಿ, ಆರ್ಥಿಕ ವರ್ಷಾಂತ್ಯ ಸಮೀಪಿಸುತ್ತಿರುವುದರಿಂದ ಯಾವುದೇ ಯೋಜನೆಗಳಡಿ ಅನುದಾನ ವ್ಯಪಗತವಾಗದಂತೆ ಮುಂಜಾಗ್ರತೆ ವಹಿಸಿ, ಗಾಂಧೀ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಾಮಗಾರಿಗಳ ವಿವರಗಳನ್ನು ಅಳವಡಿಸಲು ಸೂಚನೆ ನೀಡಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಮುಖ್ಯಲೆಕ್ಕಾಧಿಕಾರಿ,
ಜಿಲ್ಲಾ ಪಂಚಾಯತ್, ಮೈಸೂರು

"ಅನುಮೋದಿಸಿದೆ"

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ಮೈಸೂರು